# ಅಳಿವಿನಂಚಿನಲ್ಲಿ ಹುಲಿ

**ಪ್ರತಿ ವರ್ಷ ಜುಲೈ 29ರಂದು ಹುಲಿದಿನ ಆಚರಿಸುತ್ತೇವೆ. ಆದರೆ ಹುಲಿಗಳ ಆವಾಸಸ್ಥಾನಗಳ ರಕ್ಷಣೆಗೆ ನಾವು ಕೈಗೊಂಡಿರುವ ಕ್ರಮಗಳು ಏನೇನೂ ಅಲ್ಲ!**

ಚಿತ್ರ– ಲೇಖನ: **ಆರ್.ಕೆ. ಮಧು**





ನಮ್ಮ ರಾಷ್ಟ್ರ ಪ್ರಾಣಿ 'ಕಾಡಿನ ರಾಜ' ಹುಲಿಗೆ ಸ್ವಾತಂತ್ರ್ಯಪೂರ್ವದಲ್ಲಿ ಇದ್ದ ಮಹತ್ವ ಇಂದು ಕಾಣದಾಗಿದೆ. ಅದರ 'ರಾಷ್ಟ್ರಪ್ರಾಣಿ'ಯ ಪಟ್ಟ ಅಲುಗುತ್ತಿದೆ. ಸಿಂಹಾಸನ ನಡುಗುತ್ತಿದೆ. ಮಾನವನ ಮೋಜಿಗೆ ಬಲಿಯಾಗಿ ವಿನಾಶದ ಅಂಚಿಗೂ ಬರುತ್ತಿದೆ. ಕಳ್ಳಬೇಟೆಯಿಂದಾಗಿ ಅವುಗಳು ಗಲಿ–ಬಿಲಿಗೊಂಡಿವೆ. ಈ ನಡುವೆಯೇ 'ವಿಶ್ವ ಹುಲಿ ದಿನ' (ಜುಲೈ 29) ಬಂದಿದೆ.

ಅಭಯಾರಣ್ಯದಲ್ಲಿ ನಿರ್ಭಯದಿಂದ ಆರ್ಭಟಿಸುತ್ತಾ ಏಕಾಂಗಿಯಾಗಿ ನೆಲೆಸಿದ್ದ ಹುಲಿರಾಯನ ಏಕಾಂತಕ್ಕೆ ಈಗ ಭಂಗ ಬಂದಿರುವುದು ಏಕೆ?

ಅರಣ್ಯದಲ್ಲಿ 13ರಿಂದ 15 ವರ್ಷ ಕಾಲ ಬದುಕುವ ಹುಲಿ, ವರ್ಷವಿಡೀ ಮರಿ ಹಾಕುವ ಸಾಮರ್ಥ್ಯ ಹೊಂದಿದೆ. ಆದರೆ ಮರಿ ಹಾಕುವ ಅದರ ನೆಚ್ಚಿನ ಅವಧಿ ನವೆಂಬರ್– ಏಪ್ರಿಲ್. ಸಾಮಾನ್ಯವಾಗಿ ಹುಲಿ ಏಕಾಂಗಿಜೀವಿ. ಮರಿ ಹಾಕುವ ಸಮಯದಲ್ಲಿ ಮಾತ್ರ ಗಂಡು– ಹೆಣ್ಣು ಒಂದಾಗಿರುತ್ತವೆ. ಮರಿ ಹುಟ್ಟಿ ಸುಮಾರು ಒಂದೂವರೆ ವರ್ಷದ ಅವಧಿಯಲ್ಲಿ ಎರಡೂ ಬೇರೆಯಾಗಿ ಮತ್ತೆ ಏಕಾಂತವಾಸ ಬಯಸುತ್ತವೆ. ಹುಲಿ 3ರಿಂದ 4 ಮರಿಗಳಿಗೆ ಜನ್ಮ ನೀಡುತ್ತದೆ. ಕೆಲವೊಮ್ಮೆ ಆರು ಮರಿಗಳು ಜನ್ಮ ತಾಳುವುದೂ ಇದೆ.

ಹುಲಿಗಳಿಗೆ ಒಂದೇ ದಾಳಿಯಲ್ಲಿ ಬೇಟೆಯ ಊಟ ಸಿಗುವುದಿಲ್ಲ. ಒಂದು ಬೇಟೆಗೆ 10ರಿಂದ 15 ಸಲ ಪ್ರಯತ್ನ ಪಡುವ ಪರಿಶ್ರಮಿ ಜೀವಿಯಿದು. ದೊಡ್ಡ ಪ್ರಾಣಿಯ ಬೇಟೆಯಾದರೆ ಅದನ್ನೇ 3–4 ದಿನಗಳ ಕಾಲ ತಿನ್ನುತ್ತದೆ.

ಕೆಲವೊಮ್ಮೆ ಜನನ ವೈಪರೀತ್ಯದಿಂದ ಬಿಳಿ ಹುಲಿಗಳು ಜನಿಸುವುದುಂಟು. ಭಾರತದಲ್ಲಿ ಮಧ್ಯಪ್ರದೇಶದ ಬಾಂಧವಘಡ ಅರಣ್ಯ ಬಿಳಿ ಹುಲಿಗಳಿಗೆ ಹಿಂದೊಮ್ಮೆ ನೆಚ್ಚಿನ ತಾಣವಾಗಿತ್ತು. ಸುಂದರಬನದಲ್ಲಿ ಈಗಲೂ ಬಿಳಿ ಹುಲಿಗಳಿವೆ.

ರಾಜ– ಮಹಾರಾಜರ ಕಾಲದಲ್ಲಿ ಅವರ ಶೌರ್ಯ ಪ್ರದರ್ಶನಕ್ಕೆ ಬೇಟೆಯ ಆಟಕ್ಕೆ ನಮ್ಮ ಹುಲಿರಾಯ ಬಲಿಯಾಗಿದ್ದಾನೆ. ಈಗ ರಾಜರ ಬದಲಿಗೆ ಕಳ್ಳ–ಬೇಟೆಗಾರರು ಹುಟ್ಟಿಕೊಂಡಿದ್ದಾರೆ. ಒಂದೊಮ್ಮೆ ಜಗತ್ತಿನಾದ್ಯಂತ ಒಂದು ಲಕ್ಷ ಹುಲಿಗಳಿದ್ದವು. ಬಳಿಕ ಅವುಗಳ ಸಂಖ್ಯೆ 40 ಸಾವಿರಕ್ಕೆ ಇಳಿಯಿತು. ಈಗ ಒಟ್ಟು 3890 ಹುಲಿಗಳಿವೆ ಎಂದರೆ ಹುಲಿಗಳ ಸಂತತಿ ಎಷ್ಟೊಂದು ವೇಗವಾಗಿ ಅಳಿವಿನಂಚಿಗೆ ಸಾಗುತ್ತಿದೆ ಎನ್ನುವುದನ್ನು ಲೆಕ್ಕ ಹಾಕಬಹುದು. ಬೆಂಗಾಲ್ ಹುಲಿ, ಸೈಬೀರಿಯಾದ ಹುಲಿ, ಸುಮಾತ್ರ ಹುಲಿ, ದಕ್ಷಿಣ ಚೈನಾ ಹುಲಿ– ಹೀಗೆ ಎಲ್ಲ ಪ್ರಬೇಧಗಳೂ ವಿನಾಶದ ಅಂಚಿನಲ್ಲಿವೆ. ಅದರಲ್ಲೂ ಅಪರೂಪದ ಪ್ರಬೇಧಗಳಾದ ಜಾವಾ, ಬಾಲಿ, ಕ್ಯಾಸ್ಪಿಯನ್ ಹುಲಿಗಳೂ ಕಣ್ಮರೆ–ಯಾಗುತ್ತಿರುವುದು ವನ್ಯಜೀವಿಗಳ ಕುರಿತು ನಮಗಿರುವ ತಾತ್ಸಾರವನ್ನು ಎತ್ತಿ ತೋರಿಸುತ್ತದೆ.

ಹುಲಿ ಬಲು ನಾಜೂಕಿನ ಪ್ರಾಣಿ. ಎಲ್ಲ ಬಗೆಯ ಹವಾಮಾನ ವೈಪರೀತ್ಯಕ್ಕೆ ಎದೆಗೊಟ್ಟು ಬದುಕುವ ಗಟ್ಟಿಜೀವಿ. ಪರಿಸರದ ಏರಿಳಿತಕ್ಕೆ ತನ್ನನ್ನು ತಾನು ಹೊಂದಿಸಿಕೊಳ್ಳುವ ವಿಶಿಷ್ಟ ಸಾಮರ್ಥ್ಯ ಅದಕ್ಕೆ ಇದೆ. ಆದರೆ ಮಾನವನ ಮೋಸಕ್ಕೆ, ಕುತಂತ್ರಕ್ಕೆ ತಕ್ಕ ಉತ್ತರ ನೀಡುವಲ್ಲಿ ನಿರುತ್ತರನಾಗಿ ನಿರ್ನಾಮ ಹಂತಕ್ಕೆ ಬಂದು ನಿಂತಿದೆ.

ಹುಲಿಗಳ ಸಂತತಿ ಕ್ಷೀಣಿಸಲು ಬಿಡಬಾರದು ಎಂಬ ಎಚ್ಚರದಿಂದ ಸರ್ಕಾರ–ಗಳು ಹಲವಾರು ಕ್ರಮಗಳನ್ನು ಕೈಗೊಂಡಿವೆ. ಇದರ ಪರಿಣಾಮವಾಗಿ ಕಳೆದ ಐದು ವರ್ಷಗಳಿಂದ ಹುಲಿಗಳ ಸಂಖ್ಯೆ ಹೆಚ್ಚಾಗಿದೆ ಎನ್ನುವುದು ಸುಳ್ಳಲ್ಲ. ಆದರೆ ಎಷ್ಟೇ ಕ್ರಮಗಳನ್ನು ಕೈಗೊಂಡರೂ ಒಟ್ಟು ಹುಲಿಗಳ ಸಂಖ್ಯೆ 4000ದ ಗಡಿ ದಾಟಿಲ್ಲ. ಮಾನವ– ಹುಲಿಗಳ ಸಂಘರ್ಷವೂ ಹೆಚ್ಚಾಗಿರುವುದು ಇದಕ್ಕೆ